ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2431
ಸದಸ್ಯರ ಹೆಸರು	:	ಡಾ॥ ಡಿ ತಿಮ್ಮಯ್ಯ
ಉತ್ತರಿಸುವ ದಿನಾಂಕ	:	22/03/2022
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿರುವ ಪುರಸಭೆ, ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ಪ್ರಸ್ತುತ 123–ಪುರಸಭೆಗಳು ಮತ್ತು 118 ಪಟ್ಟಣ ಪಂಚಾಯಿತಿಗಳು ಇರುತ್ತವೆ. ಇವುಗಳಲ್ಲಿ ಬೆಂಗಳೂರು ನಗರ ಜಿಲ್ಲೆಯ ಕೋನಪ್ಪನ ಅಗ್ರಹಾರ ಪುರಸಭೆ ಹಾಗೂ ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಮತ್ತು ರಾಯಚೂರು ಜಿಲ್ಲೆಯ ಜಾಲಹಳ್ಳಿ ಪಟ್ಟಣ ಪಂಚಾಯಿತಿ ಅಧಿಸೂಚನೆಗಳಿಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ.
(ಆ)	ಪ್ರತಿ ವರ್ಷ ಸಂಗ್ರಹವಾಗುವ ಆಸ್ತಿ ತೆರಿಗೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಸಂಗ್ರಹವಾದ ಆಸ್ತಿ ತೆರಿಗೆ ವಿವರವನ್ನು ಅನುಬಂಧ–1 ರಲ್ಲಿ ಒದಗಿಸಿದೆ.
(ಇ)	ಆಸ್ತಿ ತೆರಿಗೆ ಸಂಗ್ರಹಕ್ಕಿರುವ ಮಾನದಂಡಗಳೇನು? (ಸಂಪೂರ್ಣ ವಿವರ ನೀಡುವುದು)	ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ 101 ಮತ್ತು 102 ಹಾಗೂ ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ರ ಕಲಂ 108 ಮತ್ತು 109 ರಡಿ ಆಸ್ತಿ ತೆರಿಗೆ ನಿರ್ಧರಣೆಗೆ ಮಾನದಂಡಗಳನ್ನು ವಿವರಿಸಲಾಗಿದ್ದು ಸದರಿ ಮಾನದಂಡಗಳನ್ವಯ ನಗರ ಸ್ಥಳೀಯ ಸಂಸ್ಥೆಗಳಿಂದ ಆಸ್ತಿ ತೆರಿಗೆಯನ್ನು ವಿಧಿಸಲಾಗುತ್ತಿದೆ.

ಆಸ್ತಿ ತೆರಿಗೆಯ ದರಗಳು

ಕ್ರ ಸಂ	ಆಸ್ತಿಯ ವರ್ಗ	ಆಸ್ತಿ ತೆರಿಗೆ ದರ	
		ಕನಿಷ್ಠ	ಗರಿಷ್ಠ
1.	ವಾಣಿಜ್ಯ ಕಟ್ಟಡಗಳು	0.5%	3%
2.	ವಸತಿ ಮತ್ತು ವಾಣಿಜ್ಯೇತರ	0.2%	1.5%
3.	ಖಾಲಿ ನಿವೇಶನಗಳು	0.2%	0.5%
4.	ಕೈಗಾರಿಕೆಗಳು	ವಾಣಿಜ್ಯ ಕಟ್ಟಡಗಳಿಗೆ ನಿಗದಿಪಡಿಸುವ ಆಸ್ತಿ ತೆರಿಗೆ ದರದ ಶೇ.70 ರಷ್ಟಕ್ಕೆ ಕಡಿಮೆಯಿಲ್ಲದಂತೆ ನಿಗದಿಪಡಿಸುವುದು.	

		ಆಸ್ತಿ ತೆರಿಗೆಗೆ ಗುರಿಯಾಗತಕ್ಕ ಸ್ವತ್ತಿನ ಮೂಲ ಮೌಲ್ಯವನ್ನು ಕರ್ನಾಟಕ ಸ್ಟಾಂಪ್ ಅಧಿನಿಯಮ 1957 ರ ಕಲಂ 45 ಬಿ ರಡಿ ಪ್ರಕಟಿಸಲಾಗುವ ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳ 25% ರಷ್ಟನ್ನು ಪರಿಗಣಿಸಿ ಆಸ್ತಿ ತೆರಿಗೆಯನ್ನು ನಿರ್ಧರಿಸಲಾಗುತ್ತದೆ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ ಆರ್ಥಿಕ ವರ್ಷದ 90 ದಿನಗೊಳಗಾಗಿ ತೆರಿಗೆ ಪಾವತಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರತಿ ಆರ್ಥಿಕ ವರ್ಷದ ಏಪ್ರಿಲ್ ಮಾಹೆಯೊಳಗೆ ಆಸ್ತಿ ತೆರಿಗೆಯನ್ನು ಪಾವತಿಸಿದಲ್ಲಿ ಆಸ್ತಿ ತೆರಿಗೆಯ ಮೇಲೆ 5% ರಷ್ಟು ರಿಯಾಯಿತಿ ನೀಡಲಾಗುತ್ತದೆ. ಮೇ ಮತ್ತು ಜೂನ್ ಮಾಹೆಗಳಲ್ಲಿ ತೆರಿಗೆ ಪಾವತಿ ಮಾಡಿದಲ್ಲಿ ದಂಡ ವಿಧಿಸುವುದಿಲ್ಲ. ಜುಲೈ ಮಾಹೆಯಿಂದ ಪಾವತಿಸಬೇಕಾದ ತೆರಿಗೆ ಮೊತ್ತಕ್ಕೆ ಮಾಸಿಕ 2% ರಷ್ಟು ದಂಡವನ್ನು ವಿಧಿಸಲಾಗುತ್ತದೆ.

ಸಂಖ್ಯೆ: ನಅಇ 32 ಎಲ್‌ಸಿಕ್ಯೂ 2022

(ಎನ್. ನಾಗರಾಜು ಎಂ.ಟಿ.ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ - 1

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಡಾ:ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಪ್ರಶ್ನೆ ಸಂಖ್ಯೆ:2431ಗೆ ಉತ್ತರ ಸಲ್ಲಿಸುತ್ತಿರುವ ಬಗ್ಗೆ.

ಕಳೆದ ಮೂರು ವರ್ಷಗಳಲ್ಲಿ ಸಂಗ್ರಹವಾದ ಆಸ್ತಿ ತೆರಿಗೆ ವಿವರಗಳು (ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2018–19	2019–20	2020–21
1	ಬಾಗಲಕೋಟೆ	1505.00	1470.32	1417.24
2	ಬಳ್ಳಾರಿ	3343.59	3530.23	4920.27
3	ಬೆಂಗಳೂರು ನಗರ	1315.25	1423.89	3546.04
4	ಬೆಂಗಳೂರು ಗ್ರಾಮಾಂತರ	3208.03	3247.63	1664.87
5	ಬೆಳಗಾವಿ	5269.04	5108.85	5212.57
6	ಬೀದರ್	1114.47	1216.95	1052.61
7	ಚಾಮರಾಜನಗರ	603.01	841.97	682.73
8	ಚಿಕ್ಕಬಳ್ಳಾಪುರ	1107.06	1145.62	1144.99
9	ಚಿಕ್ಕಮಗಳೂರು	1132.74	1070.58	1331.05
10	ಚಿತ್ರದುರ್ಗ	1396.96	1545.08	1612.42
11	ದಕ್ಷಿಣ ಕನ್ನಡ	7561.29	7362.07	7570.36
12	ದಾವಣಗೆರೆ	2657.39	2642.68	3751.19
13	ಧಾರವಾಡ	5546.99	6013.48	6577.52
14	ಗದಗ	1132.01	1003.18	1268.68
15	ಹಾಸನ	1644.81	1825.91	1987.59
16	ಹಾವೇರಿ	871.11	942.37	1299.58
17	ಕಲಬುರಗಿ	2736.00	2719.09	2885.28

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2018-19	2019-20	2020-21
18	ಕೊಡಗು	434.99	480.20	496.57
19	ಕೋಲಾರ	2031.51	2266.50	1675.53
20	ಕೊಪ್ಪಳ	935.67	1049.04	1322.81
21	ಮಂಡ್ಯ	1161.83	1381.91	1498.74
22	ಮೈಸೂರು	9548.01	9768.14	13351.26
23	ರಾಯಚೂರು	1687.30	1818.89	2134.64
24	ರಾಮನಗರ	1103.18	1292.59	1355.46
25	ಶಿವಮೊಗ್ಗ	3056.73	3392.74	3698.98
26	ತುಮಕೂರು	3470.13	3410.61	4599.08
27	ಉಡುಪಿ	1629.97	1690.72	1657.28
28	ಉತ್ತರ ಕನ್ನಡ	1242.33	1166.13	1479.80
29	ವಿಜಯಪುರ	2262.63	2373.62	2509.53
30	ಯಾದಗಿರಿ	409.79	476.48	468.28
	ಒಟ್ಟು	**71118.82**	**73677.47**	**84172.95**